ಇಂದು ದಿನಾಂಕಃ 09.09.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**<u>ಪಾಟೀ ಸವಾಲುಃ</u>** ಆರೋಪಿ ಪರ ಶ್ರೀ ವಿ.ವಿ.ಎಮ್. ವಕೀಲರಿಂದಃ

1. ನನ್ನ ತಾಯಿಯನ್ನು ಆರೋಪಿತರು ದೂಡಿದ ನಂತರ ನನ್ನ ತಾಯಿ ಯಾವ ವಿಧದಲ್ಲಿ ಕೆಳಗೆ ಬಿದ್ದರೋ, ಅವರು ಅಂಗಾತವಾಗಿ ಬಿದ್ದರೋ ಅಥವಾ ಬೋರಲ್ಆಗಿ ಬಿದ್ದರೋ ಎಂಬುದಾಗಿ ನಾನು ನನ್ನ ದೂರಿನಲ್ಲಾಗಲಿ ಅಥವಾ ನನ್ನ ಮುಖ್ಯ ವಿಚಾರಣೆ ಸಾಕ್ಷಿಯಲ್ಲಿ ಹೇಳಿಲ್ಲ ಎಂದರೆ ಸರಿ. ಆ ಬಗ್ಗೆ ಹೇಳಲು ನಿಮಗೆ ಏನಾದರೂ ಸಮಸ್ಯೆ ಇತ್ತಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನಾನು ನನ್ನ ತಾಯಿ ಬಿದ್ದಿರುವುದನ್ನು ನೋಡಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ಮತ್ತು ತಾಯಿ ದಿನಾಂಕಃ 30.01.2016 ರಂದು ನಮ್ಮ ಮನೆಗೆ ಬೆಳಿಗ್ಗೆ 9-00 ಗಂಟೆ ಸಮಯಕ್ಕೆ ಬಂದಿರುತ್ತಾರೆ. ನಮ್ಮ ಮನೆಯ ಅಕ್ಕಪಕ್ಕದಲ್ಲಿ ಮನೆಗಳು ಇರುತ್ತವೆ. ಆದರೆ, ಸದರಿ ಮನೆಗಳಲ್ಲಿ ಯಾರು ವಾಸವಾಗಿರುವುದಿಲ್ಲ. ಆ ದಿನದಂದು ನನ್ನ ತಂದೆ ತಾಯಿ ಬಸ್‌ನಲ್ಲಿ ಬಂದಿರುತ್ತಾರೆ. ಆ ದಿನದಂದು ನನ್ನ ತಂದೆ ತಾಯಿ ನೇರವಾಗಿ ನಾವು ವಾಸವಾಗಿದ್ದ ಬಾಡಿಗೆ ಮನೆಗೆ ಬಂದರು. ಸದರಿ ಬಾಡಿಗೆ ಮನೆಯ ಮಾಲೀಕರು ಯಾರು ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ತಂದೆ ತಾಯಿ ನಮ್ಮ ಮನೆಗೆ ಬಂದಾಗ ನಾನು ನಮ್ಮ ಮನೆಯ ಒಳಗೆ ಇದ್ದೆ. ನನ್ನ ತಂದೆ ತಾಯಿ ಕೂಡ ಮನೆಯ ಒಳಗೆ ಬಂದಿರುತ್ತಾರೆ. ಆ ದಿನದಂದು ನಮ್ಮ ಮನೆಯಲ್ಲಿ ಆ ಸಮಯದಲ್ಲಿ ನನ್ನ ಗಂಡ, ಅತ್ತೆ ಹಾಗೂ ನನ್ನ ಮೈದುನ ಮತ್ತು ನಾನು ಇದ್ದೆವು. ಗಲಾಟೆಯು ಮನೆಯ ಒಳಗೆ ಸುಮಾರು ಅರ್ಧ ಗಂಟೆ ಸಮಯ ನಡೆದಿರುತ್ತದೆ. ನಾವು ಬಾಡಿಗೆ ಇದ್ದಂತಹ ಮನೆಯಲ್ಲಿ ಒಂದು ಹಾಲ್ ಮತ್ತು ಒಂದು ರೂಮ್ ಮಾತ್ರ ಇತ್ತು. ನಾನು ಮತ್ತು ನನ್ನ ಗಂಡ ವಾಸ ಮಾಡುತ್ತಿದ್ದ ಮನೆಯಿಂದ ನನ್ನ ಅತ್ತೆ, ಮಾವ ಹಾಗೂ ಮೈದುನ ವಾಸವಾಗಿರುವ ಮನೆಯು ಸುಮಾರು 25 ಮೀ. ಅಂತರದಲ್ಲಿ ಇತ್ತು. ಇದೇ ಮೊದಲ ಬಾರಿ ನಾನು ನನ್ನ ಸಾಕ್ಷ್ಯದಲ್ಲಿ ನಾನು ನನ್ನ ಗಂಡ, ಅತ್ತೆ ಮತ್ತು ಮೈದುನ ನಮ್ಮ ಬಾಡಿಗೆ ಮನೆಯಲ್ಲಿ ಇದ್ದಾಗ ನನ್ನ ತಂದೆ ತಾಯಿ ಬಂದರು ಎಂದು ಹೇಳುತ್ತಿದ್ದೇನೆ ಎಂದರೆ ಸರಿ. ಆ ರೀತಿ ನನ್ನ ತಂದೆ, ತಾಯಿ ಮನೆಗೆ ಬಂದಾಗ ಮನೆ ಒಳಗೆ ಜಗಳ ನಡೆಯಿತು ಎಂದು ನಾನು ಮೊದಲ ಬಾರಿಗೆ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ.

2. ನನ್ನ ಗಂಡ ನನ್ನ ತಲೆಯನ್ನು ಗೋಡೆಗೆ ಹೊಡೆದಿದ್ದರಿಂದ ನಾನು ಎಚ್ಚರ ತಪ್ಪಿ ಬಿದ್ದಿರುತ್ತೇನೆ. ನಂತರ ದಿನಾಂಕಃ 31.01.2016 ರಂದು ಹಾವೇರಿ ಜಿಲ್ಲಾ ಆಸ್ಪತ್ರೆಯಲ್ಲಿ ಮುಂಜಾನೆ ನನಗೆ ಎಚ್ಚರವಾಗಿರುತ್ತದೆ. ನಂತರ ಪೊಲೀಸರು ಅಲ್ಲಿಗೆ ಬಂದು ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಚಿಕ್ಕೇರೂರು, ಹಂಸಭಾವಿ, ಹಿರೇಕೆರೂರುಗಳಲ್ಲಿ ಒಳ್ಳೆಯ ಸುಸಜ್ಜಿತವಾದ

ಆಸ್ಪತ್ರೆಗಳು ಇವೆ ಎಂದರೆ ಸಾಕ್ಷಿಯು ನಾವು ಚಿಕ್ಕೇರೂರು ಆಸ್ಪತ್ರೆಗೆ ಹೋಗಿದ್ದು, ಅಲ್ಲಿ ಆಗುವುದಿಲ್ಲ ಎಂದು ಹೇಳಿದ ಮೇರೆಗೆ ನಾವು ಹಾವೇರಿ ಜಿಲ್ಲಾ ಆಸ್ಪತ್ರೆಗೆ ಆಂಬುಲನ್ಸ್‌ನಲ್ಲಿ ಹೋಗಿರುತ್ತೇವೆ ಎಂದು ನುಡಿದಿರುತ್ತಾರೆ. ನನಗೆ ಎಚ್ಚರಿಕೆ ಆದ ತಕ್ಷಣ ನಾನು ಮನೆಯಲ್ಲಿ ಇದ್ದೆ ಇಲ್ಲಿಗೆ ಹೇಗೆ ಬಂದೆ ಎಂದು ನನ್ನ ತಂದೆ ತಾಯಿ ಬಳಿ ಕೇಳಿದಾಗಿ ನಿನ್ನನ್ನು ನಿನ್ನ ಗಂಡ ಹೊಡೆದಿದ್ದಾರೆ ಆದುದ್ದರಿಂದ ನಿನ್ನನ್ನು ಈ ಆಸ್ಪತ್ರೆಗೆ ಕರೆತಂದಿದ್ದೇವೆ ಎಂದು ಹೇಳಿರುತ್ತಾರೆ. ಘಟನಾ ಸ್ಥಳದಿಂದ ಹಿರೇಕೆರೂರು 12 ಕಿ.ಮೀ. ದೂರ ಇದ್ದು, ಹಂಸಭಾವಿ 8 ಕಿ.ಮೀ ದೂರದಲ್ಲಿ ಇದೆ ಅಲ್ಲವಾ ಎಂದು ಆರೋಪಿ ಪರ ವಕೀಲರು ಸೂಚಿಸಿದಾಗ ಸಾಕ್ಷಿಯು ಆರೋಪಿತರು ನನ್ನನ್ನು ಹೊಡೆದಿದದ್ದು ಅವರು ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕಲ್ಲವಾ ಎಂದು ಉದ್ಧಟತನದಿಂದ ಅಸಂಬದ್ಧವಾಗಿ ಉತ್ತರವನ್ನು ನೀಡಿರುತ್ತಾರೆ. ಹಾವೇರಿ ಜಿಲ್ಲಾ ಆಸ್ಪತ್ರೆ ಘಟನಾ ಸ್ಥಳದಿಂದ ಸುಮಾರು 40 ಕಿ.ಮೀ. ದೂರದಲ್ಲಿ ಇರುತ್ತದೆ ಎಂದರೆ ಸರಿ. 1 ನೇ ಆರೋಪಿ ನನ್ನ ತಲೆಯನ್ನು ಗೋಡೆಗೆ ಗುದ್ದಿದಾಗ ನನಗೆ ಯಾವುದೇ ರಕ್ತಗಾಯವಾಗಿರುವುದಿಲ್ಲ. ದಿನಾಂಕಃ 29.01.2016 ರಂದು ನನ್ನ ಅತ್ತೆ, ಮಾವ ಮತ್ತು ಗಂಡ ನನ್ನ ತಂದೆ ತಾಯಿಗೆ ಕರೆ ಮಾಡಿ ನಮ್ಮ ಮನೆಗೆ ಕರೆದಿರುವ ಬಗ್ಗೆ ನಾವು ಪೊಲೀಸರ ಬಳಿ ಹೇಳಿರುತ್ತೇನೆ. ನಾನು ನನ್ನ ದೂರಿನಲ್ಲಿ ಹೇಳಿರುವಂತೆ ನನ್ನ ಅತ್ತೆ ಮತ್ತು ಮಾವ ದಿನಾಂಕಃ 31.01.2016 ರಂದು ನನ್ನ ಅತ್ತೆ ಮತ್ತು ಮಾವ ನನ್ನನ್ನು ಉದ್ದೇಶಿಸಿ ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದು ಆ ಸಂದರ್ಭದಲ್ಲಿ ಬೆಳಿಗ್ಗೆ 10-00 ಗಂಟೆ ಸಮಯದಲ್ಲಿ ನನ್ನ ಗಂಡ ನನ್ನ ತಾಯಿಗೆ ಕರೆ ಮಾಡಿ ತಿಳಿಸಿರುತ್ತಾರೆ ಎಂದು ನಾನು ದೂರು ದಾಖಲಿಸಲು ಮಾಹಿತಿಯನ್ನು ಕೊಟ್ಟಿರುತ್ತೇನೆ.

3. ನಾನು ನನ್ನ ಮದುವೆಯಾಗಿ ಒಂದು ವರ್ಷ ತುಂಬುವಷ್ಟರಲ್ಲಿ ನಾನು ನನ್ನ ತಾಯಿಯ ಮನೆಗೆ ಹಿರಿಯರ ಪೂಜೆ ಮಾಡಬೇಕೆಂದು ಹೋಗಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ನನ್ನ ತವರು ಮನೆಗೆ ಹೋಗಿರುವುದಿಲ್ಲ. ನನಗೆ ಮಗ ಹುಟ್ಟಿದ ನಂತರ ಆರೋಪಿತರೆ ನಾನು ಬೇಡ ಎಂದು ಹೇಳಿ ನನ್ನನ್ನು ನನ್ನ ತವರು ಮನೆಯಲ್ಲಿ ಬಿಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ಅ ರೀತಿ ನಾನು ಸುಮಾರು 6 ವರ್ಷಗಳಿಂದ ನಾನು ನನ್ನ ತವರು ಮನೆಯಲ್ಲೇ ವಾಸವಾಗಿದ್ದೇನೆ. ಈ ಪ್ರಕರಣ ದಾಖಲಾಗುವ 1 ವರೆ ತಿಂಗಳ ಮೊದಲು ನಾನು ಆರೋಪಿತರ ಮನೆಗೆ ಬಂದಿರುತ್ತೇನೆ. ನನ್ನ ಮಾವ ಕೆ.ಎಸ್.ಆರ್.ಟಿ.ಸಿ., ಬಸ್‌ನ ನಿವೃತ್ತ ಚಾಲಕ ಎಂದರೆ ಸರಿ. ಆ ರೀತಿ ನಾನು ನನ್ನ ತವರು ಮನೆಗೆ ಹಿರಿಯರ ಹಬ್ಬಕ್ಕೆ ಹೋಗುವ ನಾನು ನನ್ನ ಮಾವನಿಗೆ ನಿವೃತ್ತಿಯಿಂದ ಭತ್ಯೆವನ್ನು ಮತ್ತು ಹಾಗೂ ಮನೆಯಲ್ಲಿದ್ದಂತ ಚಿನ್ನಾಭರಣವನ್ನು ತೆಗೆದುಕೊಂಡು ಹೋಗಿರುತ್ತೇನೆ ಎಂದರೆ ಸರಿಯಲ್ಲ. ಆ ರೀತಿ ತೆಗೆದುಕೊಂಡು ಹೋಗಿದ್ದ ಹಣ ಮತ್ತು ಚಿನ್ನವನ್ನು ವಾಪಸ್ಸು ತರುವಂತೆ ಆರೋಪಿತರು ಹೇಳಿದ್ದು, ಅದರಿಂದ ತಪ್ಪಿಸಿಕೊಳ್ಳುವ ಸಲುವಾಗಿ ಈ ಒಂದು ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಬಾಸುರು ಎಂಬಲ್ಲಿ ಇರುವ ಮಠದ ಮರೆಯಲ್ಲಿ ಬಳೆಯನ್ನು ಒಡೆದು, ಬಳೆಯ ಚೂರುಗಳಿಂದ ನನ್ನ ತಾಯಿ ಕೈಗಳಿಗೆ ಕೆರೆದುಕೊಂಡು

ಅವರೇ ಗಾಯಗಳನ್ನು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನನಗೆ ನಾನೇ ಕೈಯಿಂದ ಎದೆಗೆ ಹೊಡೆದುಕೊಂಡು ಆಸ್ಪತ್ರೆಯ ವೈದ್ಯರಿಂದ ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಆರೋಪಿ ಗೋಡೆಗೆ ಗುದ್ದಿದ್ದರಿಂದ ಗಾಯವಾಗಿದ್ದು ಆ ಬಗ್ಗೆ ನಾನು ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ನಾನು ಹೇಳುವಂತೆ ಆರೋಪಿತರು ಎಂದು ನನ್ನನ್ನು ಹೊಡೆದಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ ಹಾಗೂ ದೈಹಿಕ ಮಾನಸಿಕ ಹಿಂಸೆಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ. ನಾನು ಹಾವೇರಿ ಜಿಲ್ಲಾ ಆಸ್ಪತ್ರೆಗೆ ಆಂಬುಲೆನ್ಸ್‌ನಲ್ಲಿ ಹೋಗಿಲ್ಲ ಎಂದರೆ ಸರಿಯಲ್ಲ. ಈ ಒಂದು ಸುಳ್ಳು ಪ್ರಕರಣವನ್ನು ತಯಾರಿಸುವ ಸಲುವಾಗಿ ನಾನು ಮತ್ತು ನನ್ನ ತಾಯಿ ನಮಗೆ ನಾವೇ ಹೊಡೆದುಕೊಂಡು ಆರೋಪಿತರು ಹೊಡೆದಿದ್ದಾರೆ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಎಂದೂ ವರದಕ್ಷಿಣೆಗಾಗಿ ಕಿರುಕುಳ ನೀಡಿದ್ದೇ ಇಲ್ಲ ಎಂದರೆ ಸರಿಯಲ್ಲ. ಹಾಗೂ ಯಾವತ್ತೂ ನನ್ನನ್ನು ಬಡವರು ಎಂದು ಹೀಯಾಳಿಸಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಆರೋಪಿತರ ವಿರುದ್ಧ ಹೇಳಿರುವ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

Sd/-

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.